ISSN: 2249-894X IMPACT FACTOR : 3.8014(UIF) VOLUME - 6 | ISSUE - 7 | APRIL - 2017

REVIEW OF RESEARCH

# ಬಸವಣ್ಣನವರ ಜಾತೀಯತೆಯ ಕುರಿತು ಚಿಂತನೆ

**ಶಿವಶರಣಪ್ಪ ಪಿ.ಎಚ್. ಕೋಳ್ಳಿ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗು.ವಿ. ಗುಲಬರ್ಗಾ



ಬಸವಣ್ಣನವರಂತೆ ಜಾತೀಯತೆಯ ವಿಚಾರ ವೈಖರಿಯನ್ನು ಚಿಂತಿಸುವ ಚಿಂತಕ ಹಿಂದೆ ಹುಟ್ಟಿರಲಿಲ್ಲ, ಮುಂದೆ ಹುಟ್ಟುವನೆಂಬ ಭರವಸೆಯಿಲ್ಲ. ವಿಶ್ವ ಪ್ರಪಂಚದ ಇತಿಹಾಸವನ್ನು ಅರಸುತ್ತಾ ನಡೆದರೆ, ಜಗತ್ತನ್ನು ಜಾತೀಯತೆಯ ನಿರ್ಮೂಲನೆಯಿಂದ ಮುಕ್ತಗೊಳಿಸಲು ನೂರಾರು ಚಿಂತಕರು ಜನಿಸಿದರು. ಆದರೆ ಬಸವಣ್ಣನವರಂತೆ ಜನಮಾನಸದಲ್ಲಿ ಉಳಿದುಕೊಳ್ಳಲಿಲ್ಲ ಏಕೆ? ಎಂಬ ಪ್ರಶ್ನೆ ನಮ್ಮ – ನಿಮ್ಮನ್ನು ಕಾಡುತ್ತದೆ. ಆದರೆ ಉತ್ತರವಿಷ್ಟೆ ಬಸವಣ್ಣನವರು ಸರಳವಾದ ಆಧ್ಯಾತ್ಮಿಕ ವಚನಗಳ ಬಳಕೆಯನ್ನು ತಮ್ಮ ಖಡ್ಗವಾಗಿಸಿಕೊಂಡರು. ವೈದಿಕಶಾಯಿ ವಿರುದ್ಧ ಪ್ರತಿಭಟನೆ ಮಾಡಿದರು. ಸರ್ವಜಾತಿಯವರನ್ನು ಸಮಾನಾಗಿ ಕಂಡರು. ಸ್ತ್ರೀ, ಪುರುಷ ಸಮಾನರು ಎಂದು ಅನುಭವ ಮಂಟಪದಲ್ಲಿ ಸಮಾನ ವೇದಿಕೆಯ್ನು ಕಲ್ಪಿಸಿಕೊಟ್ಟರು. ಇಂಥಹ ಶುದ್ಧ ಆಚರಣೆಗಳ ಮೂಲಕ ಬಸವಣ್ಣನವರು ಇಂದಿಗೂ ಜಗತ್‌ಪ್ರಸಿದ್ಧ ವ್ಯಕ್ತಿಯಾಗಿರುವರು.

ಬಸವಣ್ಣನವರು ವೈದಿಕ ಶಾಯಿಯನ್ನು ವಿರೋಧಿಸುತ್ತಾ ಸಮಾಜದ ಕೆಳವರ್ಗದ ಜನರನ್ನು ಪ್ರೀತಿ ಪೂರ್ವಕವಾಗಿಯೇ ಕಂಡರು. ಜನ ಸಾಗರದಲ್ಲಿ ಲೀನವಾದ ಜಾತಿ ವ್ಯವಸ್ಥೇಯ ಬೇರುಗಳನ್ನು ತಮ್ಮ ಹರಿತವಾದ ವಚನಗಳಿಂದಲೆ ಅವುಗಳನ್ನು ಕತ್ತರಿಸಲು ಪ್ರಯತ್ನಿಸಿದರು. ಬಸವಣ್ಣನವರು ಜಾತಿ ವ್ಯವಸ್ಥೆಯ ಡಾಂಭಿಕತನವನ್ನು ಈ ಕೆಳಗಿನ ವಚನದಿಂದ ಅಲ್ಲಗಳೆದರು.

> “ಚೆನ್ನಯನ ಮನೆಯ ದಾಸನ ಮಗನು
> ಕಕ್ಕಯ್ಯನ ಮನೆಯ ದಾಸಿಯ ಮಗಳು
> ಇವರಿಬ್ಬರೂ ಹೊಲದಲು ಬೆರಣಿಗೆ ಹೋಗಿ ಸಂಗವ ಮಾಡಿದರು.
> ಇವರಿಬ್ಬರಿಗೆ ಹುಟ್ಟಿದ ಮಗ ನಾನು
> ಕೂಡಲ ಸಂಗಮದೇವರ ಸಾಕ್ಷಿಯಾಗಿ”

ಬಸವಣ್ಣನವರು ತಮ್ಮ ಜನನ ಮೂಲವನ್ನು ಕೆಳಜಾತಿಗಳ ವ್ಯಕ್ತಿಗಳ ಉದರದಲ್ಲಿ ಜನಿಸಿದವ ನಾನು ಎಂದು ಹೇಳುವುದರ ಮೂಲಕ, ಕೆಳಜಾತಿಗಳನ್ನು ಮೇಲ್ವರ್ಗದ ದೃಷ್ಟಿಕೋನದಿಂದಲೆ ನೋಡುತ್ತಾರೆ. ಕೆಳವರ್ಗದವರು ಕೀಳಲ್ಲ ಅವರು ಶಿವಭಕ್ತರು, ಶಿವಸ್ವರೂಪಿಗಳು ಕೂಡಲ ಸಂಗನ ಶರಣರು ಎಂದು ಹೇಳುವುದರ ಮೂಲಕ ಸಮಾನತೆಯ ತತ್ವ ಸರ್ವರು ಆಚರಿಸಲಿ ಎಂಬುದು ಬಸವಣ್ಣನವರ ಆಶಯವಾಗಿತ್ತು. ‘ಅಪ್ಪನು ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹರ ಕಕ್ಕಯ್ಯ’ ಎಂದು ಹೇಳಿ ಜಾತೀಯತೆಯನ್ನು ನಿರ್ಮೂಲನೆ ಮಾಡುತ್ತಾರೆ. ‘ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿಯ್ಯ’ ಎಂದು ಪ್ರೀತಿಪೂರ್ವಕವಾಗಿ ನುಡಿಯುತ್ತಾರೆ. ಜಾತಿಗಳನ್ನು ಸಂಕರಗೊಳಿಸಿ ಕಾಯಕ ಜೀವಿಗಳನ್ನು ದುಡಿಯುವ ವರ್ಗವಾಗಿ ಸಂಘಟಿಸಿದ ಶ್ರೇಯಸ್ಸು ಬಸವಣ್ಣನವರಿಗೆ ಸಲ್ಲುತ್ತದೆ.

> “ಗೋತ್ರ ನಾಮವ ಬೆಸಗೊಂಡಡೆ
> ಮಾತು ನೂಕದೆ ಸುಮ್ಮನದ್ದಿರಿದೇನಯ್ಯ
> ತಲೆಯ ಕುತ್ತಿ ನೆಲನ ಬರೆವುತ್ತಿದ್ದಿರೆದೇನಯ್ಯ

ಗೋತ್ರ ನಾಮ ಮಾದಾರ ಚೆನ್ನಯ್ಯ, ಡೊಹರ ಕಕ್ಕಯ್ಯನೆಂಬುದೇನು ಕೂಡಲಸಂಗಯ್ಯ”

ಬಸವಣ್ಣನವರು ಜಾತಿಯ ಕುರಿತು ದೇವರನ್ನೆ ಪ್ರಶ್ನೆ ಮಾಡುತ್ತಾರೆ. ದೇವರನ್ನು ಅಸ್ಪೃಶ್ಯರ ಸಾಲಿನಲ್ಲಿ ನಿಲ್ಲಿಸುತ್ತಾರೆ. ಮಾದಾರ ಚೆನ್ನಯ್ಯ ಮತ್ತು ಡೋಹರ ಕಕ್ಕಯ್ಯನವರನ್ನು ದೇವರ ಗೋತ್ರ ಪುರುಷರನ್ನಾಗಿ ಮಾಡುತ್ತಾರೆ. ತಾವು ಮಾದಾರ ಚೆನ್ನಯ್ಯನ ಗೋತ್ರ ಡೋಹರ ಕಕ್ಕಯ್ಯನ ಗೋತ್ರವೆಂದು ಹೇಳಿಕೊಳ್ಳುತ್ತಾರೆ. ಜಾತಿ ವ್ಯವಸ್ಥೇಯ ಬಗ್ಗೆ ಇದ್ದ ತಿರಸ್ಕಾರಕ್ಕೆ ಈ ವಚನ ಸಾಕ್ಷಿ ಒದಗಿಸುತ್ತದೆ.

ಎಂಟುನೂರು ವರ್ಷಗಳ ಹಿಂದೆ ನಮ್ಮ ಜಾತಿ ವ್ಯವಸ್ಥೇ ಅತ್ಯಂತ ಕ್ರೂರವಾಗಿತ್ತು. ಸಮಾಜದಲ್ಲಿ ಮೇಲು–ಕೀಳುಗಳೆಂಬ ಭಾವನೆ ತುಂಬಿ ಹೋಗಿತ್ತು. ಅಂದಿನ ಸಮಾಜದಲ್ಲಿ ಬಸವಣ್ಣನವರು ಭಕ್ತರನ್ನು ಅವರು ಹುಟ್ಟಿದ ಜಾತಿಯಿಂದ ಎಣಿಸುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದರು. ಕಕ್ಕಯ್ಯ, ಮಾಚಯ್ಯ, ಹಡಪದ ಅಪ್ಪಣ್ಣ, ಹರಳಯ್ಯಾ, ಚೆನ್ನಯ್ಯರಂತಹ ಕೀಳು ಕುಲದವರೆಲ್ಲರವನ್ನು ತಮ್ಮ ಸಂಬಂಧಿ ಎಂಬುವುದು ಬಸವಣ್ಣನವರ ಸ್ಪಷ್ಟವಾದ ಪರಿಕಲ್ಪನೆಯಾಗಿತ್ತು. ಬಸವಣ್ಣನವರು ವೈದಿಕಶಾಯಿಯ ವಿರುದ್ಧ ಧ್ವನಿ ಎತ್ತಿ, ಉಚ್ಚ–ನೀಚ, ಮೇಲು–ಕೀಳುಗಳೆಂಬ ಭಾವನೆಯನ್ನು ಖಡಾಖಂಡಿತವಾಗಿ ತಿರಸ್ಕರಿಸುತ್ತಾರೆ. ನವಸ್ಮಾಜವನ್ನು ಕಟ್ಟಲು ಸರ್ವರು ಸಮಾನರಾದಾಗ ಮಾತ್ರ ಸಾಧ್ಯ ಎಂದು ಹೇಳುತ್ತಾರೆ. ಬಸವಣ್ಣನವರ ದೃಷ್ಟಿಯಲ್ಲಿ ಮೇಲ್ವರ್ಗ ಕೆಳವರ್ಗಗಳೆಂಬ ಭೇದವಿಲ್ಲ, ಜಾತೀಯತೆಯನ್ನು ಸಂಪೂರ್ಣವಾಗಿ ನಿರಾಕರಿಸಿದರು ಮತ್ತು ಅದರ ಅಡಿಯಲ್ಲಿ ನಡೆದುಕೊಂಡವರು. ಮಹಾಮಾನವತಾವಾದಿ ಬಸವಣ್ಣನವರು.

**ಅಡಿ ಟಿಪ್ಪಣಿಗಳು :**


1. **ರಂಜಾನ್‌ದರ್ಗಾ : ಜಾತಿ ವ್ಯವಸ್ಥೆಗೆ ಸವಾಲಾದ ಶರಣರು . 2013 . ಲೋಹಿಯಾ ಪ್ರಕಾಶನ ಬಳ್ಳಾರಿ.**
2. **ಬಸವರಾಜ ಬಲ್ಲೂರ (ಸಂ) : ಕಲ್ಯಾಣದ ಪಣತೆ : 2005 . ನಾವು ಪ್ರಕಾಶನ ಬೀದರ.**
3. **ಚಂದ್ರಶೇಖರಯ್ಯ ಎಂ.ಜಿ. : ಬಸವಣ್ಣ ಜೀವನ – ಸಾಧನೆ . 2009 . ಕ.ಸಾ.ಪ. ಬೆಂಗಳೂರು.**
4. **ರಂಜಾನ್‌ದರ್ಗಾ : ಬಸವ ಪ್ರಜ್ಞೆ . 2002 . ಲೋಹಿಯಾ ಪ್ರಕಾಶನ ಬಳ್ಳಾರಿ.**